# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

KANNADA POST

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 148 | Pages. 2 | Date: 15-04-2025, TUESDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 148 - ಪುಟಗಳು : 2 - 15 ಏಪ್ರಿಲ್ 2025 ಮಂಗಳವಾರ Ph: 8762954248 ದರ : ₹1


# ಜಿಲ್ಲಾದ್ಯಂತ ಅರ್ಥಪೂರ್ಣ ಅಂಬೇಡ್ಕರ್ ಜಯಂತಿ

## ಸಂವಿಧಾನದಿಂದಲೇ ನಾನು ಮಂತ್ರಿಯಾಗಿದ್ದೇನೆ ಸಚಿವ ಕೆ.ಎನ್. ರಾಜಣ್ಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರ ಸೇರಿ ಜಿಲ್ಲೆಯ ವಿವಿಧೆಡೆ ಸೋಮವಾರ ಸಮಾನತೆಯ ಹರಿಕಾರ, ಶ್ರೇಷ್ಠ ಆರ್ಥಿಕ ತಜ್ಞ, ಸಂವಿಧಾನ ಸೃಷ್ಟಿಕರ್ತ ಡಾ. ಬಿ.ಆರ್. ಅಂಬೇಡ್ಕರ್ ಅವರ 134ನೇ ಜನ್ಮ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಜಿಲ್ಲಾ ಕೇಂದ್ರ, ತಾಲ್ಲೂಕು ಕೇಂದ್ರಗಳಲ್ಲಿ ಸರ್ಕಾರಿ ಕಚೇರಿ ಹಾಗೂ ವಿವಿಧ ಸಂಘ ಸಂಸ್ಥೆಗಳು ಅಂಬೇಡ್ಕರ್ ಅವರನ್ನು ಸ್ಮರಿಸಿದವು.

ಹಾಸನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ, ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಪಿ. ಸ್ವರೂಪ್ ಸೇರಿದಂತೆ ಅನೇಕರು ಭಾಗವಹಿಸಿದ್ದರು.



## ಸಂವಿಧಾನ ಬದಲಾವಣೆ ಸಾಧ್ಯವಿಲ್ಲ

ನಿವೃತ್ತ ಪ್ರೊಫೆಸರ್ ಡಾ. ಹೆಚ್.ಆರ್.ಸುರೇಂದ್ರ ಮಾತನಾಡಿ, ಯಾರೇ ಬಂದು ತಲೆ ಕೆಳಗಾಗಿ ನಿಂತರೂ ಸಂವಿಧಾನ ಬದಲಿಸಲು ಸಾಧ್ಯವಿಲ್ಲ. ಜ್ಞಾನಕ್ಕೆ ಎಲ್ಲರೂ ತಲೆಬಾಗಲೇಬೇಕು. ಅಂಬೇಡ್ಕರ್ ಅಂತಹ ಜ್ಞಾನವನ್ನು ಹೊಂದಿದ್ದರು. ಹಾಗಾಗಿಯೇ ಬೃಹತ್ ಸಂವಿಧಾನ ರಚನೆ ಮಾಡಲು ಸಾಧ್ಯವಾಯಿತು. ಸಂವಿಧಾನ ಕರುಡು ಸಮಿಯಲ್ಲಿ 7 ಜನ ಸದಸ್ಯರಿದ್ದರೂ ಒಬ್ಬೊಬ್ಬರು ಒಂದೊಂದು ಕಾರಣಕ್ಕೆ ಬರಲಿಲ್ಲ. ಅಂಬೇಡ್ಕರ್ ಒಬ್ಬರೇ ಕರಡು ಸಂವಿಧಾನವನ್ನು ಬರೆದು ಸಮರ್ಪಿಸಿದ್ದಾರೆ. ಅಂತಹ ಸಂವಿಧಾನವನ್ನು ಯಾರಿಂದಲೂ ಬದಲಾಯಿಸಲು ಸಾಧ್ಯವಿಲ್ಲ. ಇಂದಿನ ರಾಜಕಾರಣಿಗಳು ಅಂಬೇಡ್ಕರ್‌ಗೆ ಗೌರವ ನೀಡುವುದನ್ನು ಮರೆತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ನಗರಸಭೆ ಅಧ್ಯಕ್ಷ ಎಂ. ಚಂದ್ರೇಗೌಡ, ಜಿಲ್ಲಾಧಿಕಾರಿ ಸಿ. ಸತ್ಯಭಾಮ, ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯ ನಿರ್ವಾಹಣಾಧಿಕಾರಿ ಬಿ.ಆರ್. ಪೂರ್ಣಿಮಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ. ಗೋಪಾಲಸ್ವಾಮಿ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಎಚ್.ಎಲ್. ಮಲ್ಲೇಶಗೌಡ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ.ಕೃಷ್ಣೇಗೌಡ ಮತ್ತಿತರರಿದ್ದರು.

### ಡಿಸಿ ಕಚೇರಿಯಿಂದ ಭವ್ಯ ಮೆರವಣಿಗೆ

ಅಂಬೇಡ್ಕರ್ ಜಯಂತಿ ಅಂಗವಾಗಿ ಜಿಲ್ಲಾಧಿಕಾರಿ ಕಚೇರಿಯಿಂದ ಬೆಳ್ಳಿ ಸಾರೋಟಿನಲ್ಲಿ ಅಂಬೇಡ್ಕರ್ ಭಾವಚಿತ್ರ ಮೆರವಣಿಗೆ ನಡೆಸಲಾಯಿತು. ಎನ್.ಆರ್. ವೃತ್ತ, ನಗರ ಸಾರಿಗೆ ಬಸ್ ನಿಲ್ದಾಣ, ಮಹಾವೀರ ವೃತ್ತದ ಮಾರ್ಗವಾಗಿ ಮೆರವಣಿಗೆ ನಡೆಸಲಾಯಿತು. ಡೊಳ್ಳು, ವಾದ್ಯ ಕಲಾ ತಂಡಗಳು ಮೆರವಣಿಯ ಮೆರುಗು ಹೆಚ್ಚಿಸಿದವು. ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಗಣ್ಯರು ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು. ದಲಿತ ಸಮುದಾಯದ ಸಾಧಕರಿಗೆ ಸನ್ಮಾನಿಸಲಾಯಿತು.

## ಹಕ್ಕಿಗಾಗಿ ಹೋರಾಟ ಅನಿವಾರ್ಯ

ಹಾಸನಾಂಬ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ ಅಂಬೇಡ್ಕರ್ ಜಯಂತಿಗೆ ಚಾಲನೆ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ಮಾತನಾಡಿ, ಸಮಾನತೆ ಸಿಗುವ ವರೆಗೆ ಸಂಘರ್ಷ ಅನಿವಾರ್ಯ. ಅಂಬೇಡ್ಕರ್ ಸಂವಿಧಾನದ ಮೂಲಕ ನೀಡಿರುವ ಹಕ್ಕುಗಳನ್ನು ಹೋರಾಟದ ಮೂಲಕವೇ ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು.

ಹೋರಾಟ ಎಂದರೆ ಬೇರೆಯವರ ಹಕ್ಕುಗಳನ್ನು ಕಿತ್ತುಕೊಳ್ಳುವುದಲ್ಲ. ನಾವು ಸಮಾಜದಲ್ಲಿ ಆರ್ಥಿಕವಾಗಿ ಸದೃಢರಾಗಲು, ವಿದ್ಯಾವಂತರಾಗಲು ಸಂವಿಧಾನ ನಮಗೆ ನೀಡಿರುವ ಹಕ್ಕುಗಳನ್ನು ಪಡೆದುಕೊಳ್ಳಲು ಹೋರಾಟ ಮಾಡಲೇಬೇಕು. ಹೋರಾಟದ ಮನಸ್ಥಿತಿ ಇಲ್ಲದಿದ್ದರೆ ಯಾರು ಕೂಡ ಹಕ್ಕುಗಳನ್ನು ಕೊಡುವುದಿಲ್ಲ. ಸಂವಿಧಾನ ಇಲ್ಲದಿದ್ದರೆ ನಾನು ಬಿಳಿ ಬಟ್ಟೆ ಹಾಕಿಕೊಂಡು ಮಂತ್ರಿಯಾಗುತ್ತಿರಲಿಲ್ಲ ಎಂದರು.

ಸಂಘರ್ಷ ಎಂದರೆ ಇರುವುದನ್ನು ಉಳಿಸುವುದು, ಇಲ್ಲದಿದ್ದವರು ಅದನ್ನು ಪಡೆದುಕೊಳ್ಳಲು ಪ್ರಯತ್ನ ಮಾಡುತ್ತಾರೆ ಅದೇ ಸಂಘರ್ಷವಾಗಿ ರೂಪುಗೊಳ್ಳುತ್ತದೆ. ಹೀಗಾಗಿ ಈ ಸಂಘರ್ಷ ನಿರಂತರವಾಗಿ



ನಡೆಯುತ್ತಿರುತ್ತದೆ. ಸಮಾಜದಲ್ಲಿ ತುಳಿತಕ್ಕೆ ಒಳಗಾದ, ಧ್ವನಿ ಇಲ್ಲದ ಸಮುದಾಯಗಳು, ಅಸಂಘಟಿತ ಸಮುದಾಯಗಳಿಗೆ ಹಕ್ಕುಗಳನ್ನು ದೊರಕಿಸಿಕೊಡುವುದು ಸಂವಿಧಾನದ ಆಶಯ. ಆದರೆ, ಸಂವಿಧಾನವನ್ನೇ ಬದಲಾಯಿಸುತ್ತೇವೆ ಎಂದು ಹೇಳುವವರ ನಡುವೆ ನಾವಿದ್ದೇವೆ. ಯಾರಾದರೂ ಸಂವಿಧಾನ ಬದಲಾಯಿಸುತ್ತೇವೆ ಎಂಬ ಪ್ರಯತ್ನಕ್ಕೆ ಮುಂದಾದರೆ ನಾನೇ ಆ ಪ್ರಯತ್ನದ ವಿರುದ್ಧವಾಗಿ ಹೋರಾಟ ಆರಂಭಿಸುತ್ತೇನೆ ಎಂದೂ ಹೇಳಿದರು.

ಅಂಬೇಡ್ಕರ್ ಶಿಕ್ಷಣ, ಸಂಘಟನೆ, ಹೋರಾಟದ ಸಂದೇಶಕ್ಕೆ ನೀಡಿದ್ದಾರೆ. ಆ ನಿಟ್ಟಿನಲ್ಲಿ ನಾವೆಲ್ಲರು ಪ್ರಯತ್ನ ನಡೆಸಿದರೂ ನಿರೀಕ್ಷಿತ ಮಟ್ಟದ ಪ್ರತಿಫಲ ದೊರೆತಿಲ್ಲ. ಬ್ರಾಹ್ಮಣ ಸಮುದಾಯವನ್ನು ಹೊರತುಪಡಿಸಿ ಶೂದ್ರ ಮತ್ತು ಅತೀ ಶೂದ್ರ ಸಮುದಾಯದವರು ಶಿಕ್ಷಣ ಪಡೆಯಬಾರದು, ಸಮಾಜದಲ್ಲಿ ಸ್ವಾಭಿಮಾನಿಗಳಾಗಿ ಬದುಕಬಾರದು ಎಂಬ ಅಸಮಾನತೆ ಶ್ರೇಣಿಕೃತ ವ್ಯವಸ್ಥೆಯ ವಿರುದ್ಧ ಅಂಬೇಡ್ಕರ್ ಹೋರಾಟ ಮಾಡಿ, ಅವರು ನೀಡಿದ ಮೊದಲ ಸಂದೇಶವೇ ಎಲ್ಲರೂ ಓದಿ ವಿದ್ಯಾವಂತರಾಗಬೇಕೆಂದು. ವಿದ್ಯಾ ಪಡೆದು ಸಂಘಟಿತರಾಗಿ, ನಿಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡಿ ಎಂದು ದೇಶದಲ್ಲಿ ತುಳಿತಕ್ಕೆ ಒಳಗಾಗಿರುವ ಜನಸಮುದಾಯಕ್ಕೆ ನೀಡಿದ್ದಾರೆ. ಆ ಸಂದೇಶವನ್ನು ನಾವು ನೀವೆಲ್ಲ ಅರಿತುಕೊಳ್ಳಬೇಕು ಎಂದು ಹೇಳಿದರು.

## ದಿಡಗದಲ್ಲಿ ಅರ್ಥಪೂರ್ಣ ಅಂಬೇಡ್ಕರ್ ಜಯಂತಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ದಿಡಗ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ, ಸರ್ಕಾರಿ ಪದವಿ ಪೂರ್ವ ಕಾಲೇಜು, ಸರ್ಕಾರಿ ಪ್ರೌಢಶಾಲೆ ಹಾಗೂ ಕೃಷಿ ಪತ್ತಿನ ಸಹಕಾರ ಸಂಘದಿಂದ ಸೋಮವಾರ ಡಾ. ಬಿ.ಆರ್. ಅಂಬೇಡ್ಕರ್ ಅವರ 134ನೇ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಗ್ರಾಮ ಪಂಚಾಯಿತಿ ಆವರಣದಲ್ಲಿ ಅಲಂಕೃತ ಬೆಳ್ಳಿ ರಥದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಗಣ್ಯರು, ಅಧಿಕಾರಿಗಳು ಹಾಗೂ ದಲಿತ ಮುಖಂಡರು ಪುಷ್ಪಾರ್ಚನೆ ಮಾಡುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು. ಪಂಚಾಯಿತಿ ಆವರಣದಿಂದ ಜಯಘೋಷದೊಂದಿಗೆ ಪ್ರಾರಂಭಗೊಂಡ ಮೆರವಣಿಗೆ ಡಾ.ರಾಜ್ ವೃತ್ತದ ಮೂಲಕ ನರಿಹಳ್ಳಿ, ಹೊಸಹಳ್ಳಿ, ಜಿನ್ನೇನಹಳ್ಳಿ ಮಾರ್ಗವಾಗಿ ಹೋಬಳಿ ಕೇಂದ್ರ ಹಿರೀಸಾವೆಗೆ ತೆರಳಿ ಶ್ರೀಕಂಠಯ್ಯ ವೃತ್ತದಿಂದ ಪ್ರಮುಖ ಬೀದಿಗಳಲ್ಲಿ ಸಾಗಿತು. ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಎಂ.ಆರ್. ವಾಸು, ದಿಡಗ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಎನ್.ಆರ್. ರತ್ನರಾಜ್, ದಿಡಗ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನರಿಹಳ್ಳಿ ತಾತೇಗೌಡ, ಸಂಘದ ನಿರ್ದೇಶಕರು, ಗ್ರಾಪಂ ಅಧ್ಯಕ್ಷ ದಿನೇಶ್ ಮತ್ತು ಸದಸ್ಯರು, ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಡಿ.ಆರ್. ಮಂಜುನಾಥ್, ಪ್ರೌಢಶಾಲೆ ಮುಖ್ಯಶಿಕ್ಷಕ ನೀಲಿಸಿದ್ದು, ಪಿಡಿಓ ಕೆ.ಎಸ್. ಪ್ರಕಾಶ್, ಅಂಬೇಡ್ಕರ್ ವಿಚಾರವಾದಿ ಹೊಸಹಳ್ಳಿ ಅಣ್ಣಯ್ಯ ಹಾಗೂ ಇತರರು ಇದ್ದರು.

## ಜಾತಿ ಗಣತಿ: ಚರ್ಚೆಗೆ ಅವಕಾಶವಿದೆ ದುಡುಕಿನ ನಿರ್ಧಾರವಿಲ್ಲ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಾತಿ ಗಣತಿ ವರದಿ ಅಂಗೀಕಾರ ವಿಚಾರದಲ್ಲಿ ಸರ್ಕಾರ ಯಾವುದೇ ದುಡುಕಿನ ನಿರ್ಧಾರ ಕೈಗೊಳ್ಳುವುದಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ಸ್ಪಷ್ಟಪಡಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, ಬಿಹಾರ, ತೆಲಂಗಾಣದಲ್ಲಿ ಜಾತಿಗಣತಿ ವರದಿಗಳು ಬಂದಿವೆ ಅಲ್ಲಿಯೂ ಕೂಡ ಪರ-ವಿರೋಧ ಚರ್ಚೆಗಳು ನಡೆಯುತ್ತಿವೆ. ಕರ್ನಾಟಕದಲ್ಲೂ ಚರ್ಚೆ ನಡೆಯುತ್ತಿದೆ. 2015ರಲ್ಲಿ ಐದು ಕೋಟಿ ಜನಸಂಖ್ಯೆ ಇತ್ತು, ಇವತ್ತು 7.40 ಕೋಟಿ. ಹಾಗಾಗಿ ಈ ವರದಿ ಅವೈಜ್ಞಾನಿಕ ಎಂದು ವಿರೋಧ ಪಕ್ಷದವರು ಹೇಳುತ್ತಿದ್ದಾರೆ. ಆ ಜನಸಂಖ್ಯೆಯಲ್ಲಿ ಶೇ.90 ರಷ್ಟು ಮನೆಗಳಿಗೆ ವೈಯಕ್ತಿಕವಾಗಿ ಭೇಟಿ ಮಾಡಿ, ಮನೆಯಲ್ಲಿ ಯಾರು ಹಿರಿಯರಿರುತ್ತಾರೆ,



ಅವರಿಂದ ಮಾಹಿತಿ ತೆಗೆದುಕೊಂಡು ಫಾರಂನಲ್ಲಿ ತುಂಬಿ ಅವರಿಂದ ಸಹಿ ಪಡೆದಿರುವ ದಾಖಲೆಗಳಿವೆ. ಈ ವರದಿಯಲ್ಲಿರುವ ಪ್ರಮುಖ ಅಂಶಗಳ ಬಗ್ಗೆ ಪರ ವಿರುದ್ಧ ಮಾತುಗಳು ಬರುತ್ತಿವೆ. ಸರ್ಕಾರ ಇನ್ನೂ ನಿರ್ದಿಷ್ಟ ತೀರ್ಮಾನಕ್ಕೆ ಬಂದಿಲ್ಲ ಎಂದು ತಿಳಿಸಿದರು.

ಜನರ ಅಭಿಪ್ರಾಯ, ಸಲಹೆ ಕ್ರೋಢೀಕರಿಸಿ ಏ.17 ರಂದು ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಸಾರ್ವಜನಿಕರ ಅಭಿಪ್ರಾಯ, ಸಚಿವರ ಸಲಹೆಗಳನ್ನು ಮಂಡಿಸುತ್ತೇವೆ. ಇವೆಲ್ಲವನ್ನೂ ಪರಿಗಣಿಸಿ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಸಂಭವವಿದೆ.

ಅಲ್ಲಿಯವರೆಗೂ ಕೂಡ ಈ ವಿಷಯಗಳ ಪರ-ವಿರೋಧ ಚರ್ಚೆ ನಡೆಯುತ್ತವೆ.

ಎಲ್ಲಾ ಸಲಹೆಗಳನ್ನು ತೆಗೆದುಕೊಂಡು ಯಾವುದೇ ಸಮುದಾಯದಕ್ಕೆ ಅನ್ಯಾಯವಾಗದ ರೀತಿ ಎಚ್ಚರಿಕೆಯಿಂದ ವಹಿಸುತ್ತೇವೆ ಎಂದು ಹೇಳಿದರು.

ಯಾರು ವರದಿ ವೈಜ್ಞಾನಿಕ ಎಂದು ಹೇಳುತ್ತಾರೆ ಅವರು ಈ ಅಂಶ ಸತ್ಯವಲ್ಲ, ಇದು ವಾಸ್ತವ, ಇದು ವಾಸ್ತವದಿಂದ ದೂರವಿದೆ ಎಂಬುದನ್ನು ಹೇಳಿದಾಗ ತೀವ್ರವಾಗಿ ಪರಿಗಣನೆ ಮಾಡಬಹುದು. ಯಾವ ಅಂಶಗಳ ಬಗ್ಗೆ ವಿರೋಧವಾಗುತ್ತದೆ ಅದನ್ನು ಗಣನೆಗೆ ತಗೆದುಕೊಂಡು ಯಾವ ಸಮಾಜಕ್ಕೂ ಅನ್ಯಾಯವಾಗದ ರೀತಿ, ಎಲ್ಲರಿಗೂ ನ್ಯಾಯ ಒದಗಿಸುತ್ತೇವೆ. ಯಾವುದಾದರೂ ಆಕ್ಷೇಪಾರ್ಹ ಅಂಶಗಳಿದ್ದರೆ ಅದನ್ನೆಲ್ಲ ಪರಿಶೀಲನೆ ಮಾಡುತ್ತೇವೆ.

ಈಗಲೆ ನಾವು ಅಂಗೀಕಾರ ಮಾಡಬೇಕೆಂದು ತೀರ್ಮಾನಿಸಿಲ್ಲ. ಸಚಿವ ಸಂಪುಟದ ಮುಂದೆ ಮಂಡನೆಯಾಗಿದೆ, ಏ.17 ರಂದು ಏನೆಲ್ಲ ಅಭಿಪ್ರಾಯಗಳು ಬರುತ್ತವೆ ಆ ಅಭಿಪ್ರಾಯ ಆಧರಿಸಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ ಎಂದರು.

### ಬಿಜೆಪಿಗೆ ತಿರುಗೇಟು

ವಿರೋಧ ಪಕ್ಷದವರು ನಾವು ಮಾಡಿದ್ದೆಲ್ಲ ಸರಿ ಎಂದು ಹೇಳುತ್ತಾರಾ, ನಾವು ಅದನ್ನು ಅವರಿಂದ ನಿರೀಕ್ಷೆ ಮಾಡಲ್ಲ. ಮರುಶೀಲನೆ ಮಾಡುವ ಅಗತ್ಯತೆ ಇದೆ ಎಂಬುದು ಮನವರಿಕೆಯಾದರೆ ಈ ಬಗ್ಗೆ ಗಮನ ಹರಿಸಲಾಗುವುದು. ಇನ್ನೂ ಅದ್ಯಾವುದು ಕೂಡ ಚಿಂತನೆ ಇಲ್ಲ . ಏ. 17 ರಂದು ಸಂಜೆ 4 ಗಂಟೆಗೆ ಸಚಿವ ಸಂಪುಟದ ಸಭೆ ಮುಂದೆ ಪರಾಮರ್ಶೆ ಮಾಡಲು ನಿರ್ಧಾರ ಮಾಡಿದ್ದೇವೆ ಆನಂತರ ಮುಂದಿನ ಕ್ರಮ ಕೈಗೊಳ್ಳತ್ತೇವೆ ಎಂದು ತಿಳಿಸಿದರು.

ಬಿಜೆಪಿಯವರದು ನಾಥೂರಾಮ್ ಗೋಡ್ಸೆ ಹಿಂದುತ್ವ ಪ್ರತಿಪಾದಿಸುತ್ತಾರೆ. ನಾವು ಮಹಾತ್ಮ ಗಾಂಧಿ ಹಿಂದುತ್ವದವರು ಎಂದು ತಿರುಗೇಟು ನೀಡಿದರು.

ಜಾತಿ ಗಣತಿಯಿಂದ ರಾಜಕೀಯ ಲಾಭ, ನಷ್ಟದ ಪ್ರಶ್ನೆ ಬರುವುದಿಲ್ಲ. ಅಸಹಾಯಕರು, ಧ್ವನಿ ಇಲ್ಲದವರಿಗೆ ನ್ಯಾಯ ದೊರಕಿಸಿಕೊಡುವ ಪ್ರಯತ್ನ ಅಷ್ಟೇ ಎಂದು ಸಮರ್ಥಿಸಿಕೊಂಡರು.

ಡಾ.ಬಿ.ಆರ್. ಅಂಬೇಡ್ಕರ್ ಅವರು ನಾನು ಹಿಂದುವಾಗಿ ಹುಟ್ಟಿದ್ದೇನೆ. ಆದರೆ, ಹಿಂದುವಾಗಿ ಸಾಯುವುದಿಲ್ಲ ಎಂದು ಹೇಳಿದ್ದಾರೆ. ಏಕೆ ಈ ರೀತಿ ಹೇಳಿದ್ದರು. ಹಿಂದು ಹೆಸರಿನಲ್ಲಿ ನಡೆದ ಮೂಢನಂಬಿಕೆ, ದಬ್ಬಾಳಿಕೆ, ಅಸ್ಪೃಶ್ಯರ ಮೇಲೆ ದಬ್ಬಾಳಿಕೆಯಿಂದ ಬೇಸತ್ತು ಬೌದ್ಧ ಧರ್ಮ ಸ್ವೀಕರಿಸಿದರು. ಆ ಹಿಂದುತ್ವ ಬೇಕಾ ಅಥವಾ ಸಮಾನತೆಯ ಹಿಂದು ಧರ್ಮ ಬೇಕಾ ಎಂದು ಪ್ರಶ್ನಿದರು.

## ನಗರಸಭೆ ಉಪಾಧ್ಯಕ್ಷ ಸ್ಥಾನಕ್ಕೆ ನಾಳೆ ಚುನಾವಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ನಗರಸಭೆ ಉಪಾಧ್ಯಕ್ಷ ಸ್ಥಾನಕ್ಕೆ ಏ. 16ರ ಬುಧವಾರ ಚುನಾವಣೆ ನಿಗದಿಯಾಗಿದೆ ಎಂದು ಶಾಸಕ ಹೆಚ್.ಪಿ. ಸ್ವರೂಪ್ ಹೇಳಿದರು.

ಸೋಮವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ಪಕ್ಷದ ವರಿಷ್ಠ ಹೆಚ್.ಡಿ. ರೇವಣ್ಣ ಅವರು ಸಭೆ ಕರೆದಿದ್ದಾರೆ. ನಗರಸಭೆ ಅಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯದ ಬಗ್ಗೆ ಮುಂದಿನ ದಿನಗಳಲ್ಲಿ ಚರ್ಚೆ ಮಾಡುತ್ತೇವೆ. ಮೊದಲು ಉಪಾಧ್ಯಕ್ಷ ಸ್ಥಾನ ಚುನಾವಣೆ ನಡೆಯಲಿ. ಉಪಾಧ್ಯಕ್ಷರ ನೇತೃತ್ವದಲ್ಲಿ ಅವಿಶ್ವಾಸ ನಿರ್ಣಯ ಮಂಡನೆಗೆ ದಿನಾಂಕ ನಿಗದಿಪಡಿಸುತ್ತಾರೆ. ಈ ವಿಚಾರದಲ್ಲಿ ಬಿಜೆಪಿಯವರ ಸಹಕಾರ ಕೋರುತ್ತೇವೆ ಎಂದರು.

ಎಂ. ಚಂದ್ರೇಗೌಡ ಅವರಿಗೆ ಅಧ್ಯಕ್ಷ ಸ್ಥಾನ ಕಲ್ಪಿಸುವಲ್ಲಿ ನನ್ನದು ಪಾತ್ರವಿದೆ. ಆದರೆ ಅವರು ಒಪ್ಪಂದದ ಪ್ರಕಾರ ಸ್ಥಾನವನ್ನು ಬಿಟ್ಟುಕೊಡುತ್ತಿಲ್ಲ. ನಮ್ಮ ಪಕ್ಷದವರೇ ಆಗಿರುವುದರಿಂದ ಹಗುರವಾಗಿ ಮಾತನಾಡುವುದು ಸರಿಯಲ್ಲ. ಅವಿಶ್ವಾಸ ನಿರ್ಣಯಕ್ಕೆ ವರಿಷ್ಠರು ನಿರ್ಧರಿಸಿರುವುದರಿಂದ ಬಿಜೆಪಿಯವರ ಸಹಕಾರ ಕೋರುತ್ತೇವೆ ಎಂದು ತಿಳಿಸಿದರು.

## ಬದುಕಿಗೆ ನೆಮ್ಮದಿ ಮುಖ್ಯ ಹೊರತು ಆಸ್ತಿಯಲ್ಲ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವ್ಯಕ್ತಿ ಪ್ರಾಮಾಣಿಕವಾಗಿ ಅಲ್ಪ ಸಂಪಾದನೆ ಮಾಡಿದರೂ ನೆಮ್ಮದಿ ಜೀವನ ನಡೆಸುತ್ತಾನೆ. ಅರ್ಥಪೂರ್ಣ ಬದುಕಿಗೆ ನೆಮ್ಮದಿ ಮುಖ್ಯ ಹೊರತು ಆಸ್ತಿಯಲ್ಲ ಎಂದು ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಕಟ್ಟಾಯ ಹೋಬಳಿ ಸತ್ತಿಗರಹಳ್ಳಿ ಗ್ರಾಮದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಶ್ರೀ ಬಸವೇಶ್ವರಸ್ವಾಮಿ ದೇವಾಲಯ ಜೀರ್ಣೋದ್ಧಾರ ಮತ್ತು ನೂತನ ವಿಗ್ರಹಗಳ ಪ್ರಾಣ ಪ್ರತಿಷ್ಠಾಪನಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಶ್ರೀಗಳು, ಧರ್ಮ-ಸಂಸ್ಕೃತಿ ಉಳಿಸಿ ಬೆಳೆಸುವ ಕೆಲಸವಾಗಬೇಕು. ಪ್ರಾಮಾಣಿಕ ಹಾದಿಯಲ್ಲಿ ನಡೆದರೆ ಬದುಕು ಅರ್ಥಪೂರ್ಣವಾಗಿರುತ್ತದೆ. ಸಂಸಾರ ಸುಗಮವಾಗಿ ಸಾಗಬೇಕೆಂದರೆ ಹೆಣ್ಣಿನ ಪಾತ್ರ ಮುಖ್ಯವಾಗಿರುತ್ತದೆ. ಮಕ್ಕಳಿಗೆ ಉತ್ತಮ ಸಂಸ್ಕಾರ ಆಚಾರ ವಿಚಾರಗಳನ್ನು ಕಲಿಸುವ ತಾಯಿ ಮೊದಲ ಗುರು ಆಗಿರುತ್ತಾಳೆ ಎಂದರು.



ಗ್ರಾಮೀಣ ಜೀವನ ಕಷ್ಟಕರವಾದರೂ ಇಲ್ಲಿರುವಷ್ಟು ನೆಮ್ಮದಿ ನಗರಗಳಲ್ಲಿ ಸಿಗುವುದಿಲ್ಲ. ಕೃಷಿ ಬದುಕನ್ನು ಹಸನುಗೊಳಿಸುತ್ತದೆ. ಪರಸ್ಪರ ಸ್ನೇಹ, ಸೌಹಾರ್ದವನ್ನು ಹಳ್ಳಿಗಳಲ್ಲೇ ಕಾಣುತ್ತೇವೆ. ಧಾರ್ಮಿಕ ಕಾರ್ಯಕ್ರಮಗಳು ಸಂಬಂಧಗಳನ್ನು ವೃದ್ಧಿಸುತ್ತವೆ ಎಂದು ಹೇಳಿದರು.

ಸತ್ತಿಗರಹಳ್ಳಿ ಗ್ರಾಮದ ಬಹುತೇಕ ಯುವಕರು ಸೇನೆ ಸೇರಿರುವುದು ಖುಷಿಯ ವಿಚಾರ. ದೇಶ ರಕ್ಷಣೆಯಲ್ಲಿ ಸೈನಿಕರ ಪಾತ್ರ ಮಹತ್ವದ್ದಾಗಿರುತ್ತದೆ ಎಂದರು. ನುಗ್ಗೇಹಳ್ಳಿ ಪುರವರ್ಗದ ಮಠದ ಶ್ರೀ ಮಹೇಶ್ವರ ಸ್ವಾಮೀಜಿ, ರಾಮಯೋಗೀಶ್ವರ ಬೇಬಿ ಮಠದ ಶ್ರೀ ಶಿವಬಸವ ಸ್ವಾಮೀಜಿ, ತೇಜೂರು ಸಿದ್ದರಾಮೇಶ್ವರ ಮಠದ ಶ್ರೀ ಕಲ್ಯಾಣ ಸ್ವಾಮೀಜಿ, ಟಿ. ಮಾಯಗೋಡನಹಳ್ಳಿ ರಾಜಾಪುರ ಮಠದ ಶ್ರೀ ಸೋಮಶೇಖರ ಸ್ವಾಮೀಜಿ, ಬಸವ ರಾಜೇಂದ್ರ ಸ್ವಾಮೀಜಿ, ಇಮ್ಮಡಿ ಶ್ರೀ ಶಿವಲಿಂಗ ಸ್ವಾಮೀಜಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆ ಅಧ್ಯಕ್ಷೆ ನವಿಲೆ ಪರಮೇಶ್, ತಾಲ್ಲೂಕು ಅಧ್ಯಕ್ಷ ಕಟ್ಟಾಯ ಶಿವಕುಮಾರ್, ಆನಂದ್ ಪಾಟೀಲ್ ಮತ್ತಿತರರಿದ್ದರು.

## ಪತ್ರಕರ್ತರ ಕ್ರಿಕೆಟ್: ಹಾಸನ ತಂಡ ಪ್ರಥಮ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಹಾಗೂ ಜಿಲ್ಲಾ ಘಟಕಗಳ ವತಿಯಿಂದ ನಗರದಲ್ಲಿ ನಡೆದ ರಾಜ್ಯಮಟ್ಟದ ಪತ್ರಕರ್ತರ ಕ್ರಿಕೆಟ್ ಟೂರ್ನಿಯಲ್ಲಿ ಹಾಸನ ತಂಡ ಪ್ರಥಮ ಬಹುಮಾನ ಪಡೆಯಿತು.

ಬೆಂಗಳೂರು ತಂಡ ದ್ವಿತೀಯ, ಕೊಡಗು ತಂಡ ತೃತೀಯ ಹಾಗೂ ರಾಯಚೂರು ತಂಡ ನಾಲ್ಕನೇ ಸ್ಥಾನ ಪಡೆದವು.

ಭಾನುವಾರ ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಮಾಜಿ ಸಚಿವ ಎಚ್.ಡಿ. ರೇವಣ್ಣ, ಹಾಸನದಲ್ಲಿ ರಾಜ್ಯ ಮಟ್ಟದ ಕ್ರೀಡಾಕೂಟ ಏರ್ಪಡಿಸಿರುವುದು ಉತ್ತಮ ಬೆಳವಣಿಗೆ ಎಂದು ಹಾರೈಸಿದರು.

ಶಾಸಕ ಎಚ್.ಪಿ. ಸ್ವರೂಪ್ ಮಾತನಾಡಿ, ಪತ್ರಕರ್ತರ ಸಂಘವು ಆರೋಗ್ಯ ಮೇಳ, ಕ್ರೀಡಾಕೂಟದಂತಹ ಹಲವಾರು ಕಾರ್ಯಕ್ರಮಗಳನ್ನು ಪತ್ರಕರ್ತರಿಗೆ ಆಯೋಜಿಸುತ್ತ ಬರುತ್ತಿದೆ.



ಕೆಲಸದ ಒತ್ತಡದಲ್ಲಿರುವ ಪತ್ರಕರ್ತರು ಬಿಡುವಿನ ಸಮಯದಲ್ಲಿ ಕ್ರೀಡೆಯಲ್ಲಿ ಭಾಗವಹಿಸುವಿಕೆ ಆರೋಗ್ಯಕ್ಕೆ ಉತ್ತಮ ಎಂದರು.

ಶಾಸಕ ಸಿ.ಎನ್. ಬಾಲಕೃಷ್ಣ ಮಾತನಾಡಿ, ಮಾನಸಿಕ ಹಾಗೂ ದೈಹಿಕ ಸ್ಫೂರ್ತಿಗೆ ಕ್ರೀಡೆ ಅವಶ್ಯಕ. ದೇಶದಲ್ಲಿ ಕ್ರಿಕೆಟ್ ಸ್ವಾತಂತ್ರ್ಯ ಪೂರ್ವದಿಂದಲೂ ಜನಪ್ರಿಯತೆ ಗಳಿಸಿದ್ದು, ಕೋಟ್ಯಂತರ ಮಂದಿ ನೆಚ್ಚಿನ ಆಟವಾಗಿದೆ. ಬೇಸಿಗೆ ಕಾಲದಲ್ಲಿ ಹೊಲಗದ್ದೆ, ಬಯಲುಗಳಲ್ಲಿ ಕ್ರಿಕೆಟ್ ಆಡುವುದನ್ನು ಕಂಡಿದ್ದೇವೆ ಎಂದರು.

ಶಾಸಕ ಸಿಮೆಂಟ್ ಮಂಜು, ನೌಕರರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಬಿ.ಪಿ. ಕೃಷ್ಣೇಗೌಡ ಮಾತನಾಡಿದರು.

ಪತ್ರಕರ್ತರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಶಿವಾನಂದ ತಗಡೂರು, ಉಪಾಧ್ಯಕ್ಷರಾದ ಅಜ್ಜಮಾಡ ಕುಟ್ಟಪ್ಪ, ಭವಾನಿಸಿಂಗ್ ಠಾಕೂರ್, ಪುಂಡಲೀಕ ಬಾಳೋಜಿ, ಖಜಾಂಚಿ ವಾಸುದೇವ ಹೊಳ್ಳ, ಕಾರ್ಯದರ್ಶಿಗಳಾದ ಮತ್ತಿಕೆರೆ ಜಯರಾಂ, ಸೋಮಶೇಖರ ಕೆರಗೋಡು, ನಿಂಗಪ್ಪ ಚಾವಡಿ, ಬಂಡಿಗೌಡ, ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಕೆ.ಎಚ್. ವೇಣುಕುಮಾರ್, ಪದಾಧಿಕಾರಿಗಳಾದ ಎಚ್.ಬಿ. ಮದನಗೌಡ, ಬಿ.ಸಿ. ಶಶಿಧರ್, ಜೆ.ಆರ್.ಕೆಂಚೇಗೌಡ, ಎನ್. ರವಿಕುಮಾರ್, ದೀಪಕ್, ರವಿ ನಾಕಲಗೂಡು, ಕೆ.ಆರ್. ಮಂಜುನಾಥ್, ಲೀಲಾವತಿ, ಬಿ.ಆರ್. ಉದಯ್ ಕುಮಾರ್, ಪ್ರಸನ್ನಕುಮಾರ್, ಮೋಹನ್, ಹರೀಶ, ಪಿ.ಎ. ಶ್ರೀನಿವಾಸ್ ಉಪಸ್ಥಿತರಿದ್ದರು.

# ಭಯವೇ ರೋಗ-ಧೈರ್ಯವೇ ಔಷಧಿ



- ಚೇತನ್ ಗುರೂಜಿ, ಬಸವ ಯೋಗ ಕೇಂದ್ರ, ಅಡಗೂರು

21ನೇ ಶತಮಾನದಲ್ಲಿ ಬದುಕುತ್ತಿರುವ ನಾವೆಲ್ಲರೂ ಪುಣ್ಯವಂತರೆ. ಏಕೆಂದರೆ ಸಕಲ ಸೌಲಭ್ಯ ಸೌಕರ್ಯಗಳು ಕೈಗೆಟುಕುವ ವ್ಯವಸ್ಥೆಯಲ್ಲಿ ಜೀವನ ನಡೆಸುತ್ತಿದ್ದೇವೆ. ಆದರೂ ಮನುಷ್ಯನಿಗೆ ಏನೋ ಒಂದು ಭಯದ ವಾತಾವರಣದಲ್ಲಿ ಬದುಕುತ್ತಿದ್ದೇನೆ ಎಂದು ಅನಿಸುತ್ತಿದೆ. ಕಾರಣ ಇತ್ತೀಚೆಗೆ ಬಂದ ಕೊರೊನಾ ಎಂಬ ಮಾರಣಾಂತಿಕ ಕಾಯಿಲೆ ಬಹಳಷ್ಟು ಜನರಿಗೆ ಭಯ ಹುಟ್ಟಿಸಿದೆ. ಆ ವೈರಸ್ ಭಯ ಹುಟ್ಟಿಸುತ್ತ ಅಥವಾ ಭಯದ ವಾತಾವರಣವನ್ನ ಸೃಷ್ಟಿಸಿ ಜನರಿಂದ ಹಣದ ಸುಲಿಗೆಯನ್ನ ಮಾಡಬಹುದು ಎಂಬ ಹುನ್ನಾರ ಇದೆಯೋ ಗೊತ್ತಿಲ್ಲ. ಮುಂದೆ ಇನ್ನು ಏನೇನು ಕಾದಿದೆಯೋ ಎಂಬ ಭಯ ಬಹಳಷ್ಟು ಜನರನ್ನು ಕಾಡುತ್ತಿದೆ.

ಸುಂದರ ಮನೆ, ಹಣ, ಆಸ್ತಿ, ಸಂಪತ್ತು ಎಲ್ಲವನ್ನು ಬಹಳ ಬೇಗ ಬಿಟ್ಟು ಹೋಗಬೇಕಲ್ಲ ಎಂಬ ಭಯವು ಮತ್ತೊಂದು ಕಡೆ ಯಾವಾಗ ಸಾವು ಬರುತ್ತದೆ ಗೊತ್ತಿಲ್ಲ ಎಂಬ ಚಿಂತೆ ಕಾಡುತ್ತಿದೆ. ಇದಕ್ಕೆಲ್ಲಾ ನಮಗೆ ನಾವೇ ಸೃಷ್ಟಿಸಿಕೊಂಡಂತಹ ಸೌಲಭ್ಯಗಳು ನಮಗೆ ಎಷ್ಟು ಪೂರಕವಾಗಿವೆಯೋ ಅಷ್ಟೇ ಅವುಗಳಿಂದ ನಮಗೆ ಮಾರಕವನ್ನು ಮಾಡುತ್ತಿವೆ ಎಂಬ ಕಲ್ಪನೆ ಜನರಿಗೆ ಈಗ ಅರ್ಥವಾಗುತ್ತಿದೆ. ಕೊರೊನಾ ಬಂದ ಸಂದರ್ಭದಲ್ಲಿ ನಿಜವಾಗಲೂ ಕೊರೊನಾ ವೈರಸ್‌ನಿಂದ ಎಷ್ಟು ಜನ ಸಾವನ್ನಪ್ಪಿದರೋ ಅದಕ್ಕಿಂತಲೂ ಹೆಚ್ಚು ಜನರು ಭಯದಿಂದಲೇ ಅಸುನೀಗಿದರು ಎಂದು ಬಹಳಷ್ಟು ಜನರು ಮಾತನಾಡುತ್ತಿದ್ದನ್ನು ಕೇಳಿದ್ದೇವೆ. ಕಾರಣ ಯಾವಾಗಲೂ ಮಾಧ್ಯಮಗಳಲ್ಲಿ ಅದೇ ಸುದ್ದಿಯನ್ನು ನೋಡುತ್ತಾ ತಮಗೂ ಇದೆ ಸ್ಥಿತಿ ಬರಬಹುದೇನೋ ಎಂಬ ಹೆದರಿಕೆಯಿಂದಲೇ ಎಷ್ಟೋ ಜನರು ಭಯಭೀತರಾಗಿದ್ದರು.

## ಮನಸ್ಸಿನ ಭಯ ದೂರವಾಗಲಿ

ನಮ್ಮ ಸುತ್ತಲಿನ ವಾತಾವರಣ ಮನೆ ಸದಸ್ಯರ ಮಾತುಗಳು ನಮ್ಮನ್ನು ಮತ್ತೊಂದಿಷ್ಟು ಕುಗ್ಗಿಸುತ್ತದೆ. ಅಂದರೆ ತಿನ್ನುವಾಗಲೂ ನಿಮಗೆ ಸಕ್ಕರೆ ಕಾಯಿಲೆ ಇದೆ, ಬಿಪಿ ಇದೆ, ಹಾರ್ಟ್ ಸಂಬಂಧಿ ತೊಂದರೆ ಇದೆ, ನಿಮಗೆ ಕಾಲು ನೋವಿದೆ, ಬೆನ್ನು ನೋವು ಇದೆ ಎಂಬ ತೊಂದರೆಯನ್ನು ಒತ್ತಿ ಯಾವಾಗಲೂ ಹೇಳುತ್ತಿದ್ದರೆ ಅವರಿಗೆ ಎಚ್ಚರಿಸುವುದಕ್ಕಿಂತ ಭಯವೇ ಹೆಚ್ಚು. ನಾವು ಅಂದುಕೊಂಡಿರುತ್ತೇವೆ ಜಾಗೃತಿ ಮಾಡುತ್ತಿದ್ದೇವೆ ಎಂದು ಆದರೆ ಮನಸ್ಸಿನಲ್ಲಿ ಭಯವನ್ನ ಹೆಚ್ಚಿಸುತ್ತಿರುತ್ತದೆ.

ಹಾಗಾದರೆ ಧೈರ್ಯ ಹೇಳಿದರೆ ಅವರು ಸರಿಯಾಗಿ ಬಿಡುತ್ತಾರಾ ಎಂದು ವಾದಿಸುವವರು ಇದ್ದಾರೆ. ಖಂಡಿತ ನಂಬಿಕೆಯ ಭರವಸೆಯ ಆತ್ಮವಿಶ್ವಾಸ ಅಲ್ಲದೆ ಧೈರ್ಯದ ಮಾತುಗಳನ್ನಾಡಿದಾಗ ಅವರು ಅರ್ಧ ಗುಣವಾಗುತ್ತಾರೆ. ಇನ್ನರ್ಧ ಔಷಧಿ ನಮ್ಮನ್ನು ಗುಣಪಡಿಸಬಹುದು. ಕೇವಲ ಔಷಧಿಯೇ ಗುಣಪಡಿಸುವುದಿದ್ದರೆ ಇಷ್ಟೆಲ್ಲಾ ಯೋಗ, ಧ್ಯಾನ, ಆಧ್ಯಾತ್ಮ ಈ ಭೂಮಿ ಮೇಲೆ ಇರುತ್ತಿರಲಿಲ್ಲ. ಇವೆಲ್ಲವೂ ನಮ್ಮ ಮನಸ್ಸಿಗೆ ಧೈರ್ಯ ಮತ್ತು ಚೈತನ್ಯವನ್ನು ತಂದುಕೊಡುತ್ತವೆ.

ಒಂದು ಕಥೆಯನ್ನ ನೋಡೋಣ- ಒಂದು ಹಳ್ಳಿ ಅವರು ಪಟ್ಟಣಕ್ಕೆ ಹೋಗುವುದಕ್ಕೆ ಬರುವುದಕ್ಕೆ ಕಾಲುದಾರಿ ಅವಲಂಬಿಸಿರುತ್ತಾರೆ. ಆ ದಾರಿ ನಡುವೆ ವಾಸವಿದ್ದ ಹಾವು, ಮುಂಗಸಿ ಒಂದಕ್ಕೊಂದು ವೈರತ್ವ ಇದ್ದರೂ ಇಲ್ಲಿ ಗೆಳೆಯರಾಗಿದ್ದವು. ಎರಡು ಮಾತನಾಡಿಕೊಂಡವು ಯಾರಾದರೂ ದಾರಿಯಲ್ಲಿ ಈ ದಿನ ನಡೆದುಕೊಂಡು ಬರುತ್ತಾರೆ. ಆವಾಗ ಏನು ಮಾಡೋಣ ಗೊತ್ತಾ? ಮುಂಗುಸಿ ಹೇಳಿತು ನೀನು ಅವರಿಗೆ ಕಚ್ಚು ತಿರುಗಿ ನೋಡುವುದರಲ್ಲಿ ನಾನು ರಸ್ತೆಯಲ್ಲಿ ಇರುತ್ತೇನೆ. ಇನ್ನೊಮ್ಮೆ ಬೇರೆ ವ್ಯಕ್ತಿ ಬಂದಾಗ ನಾನು ಕಚ್ಚುತ್ತೇನೆ. ನೀನು ದಾರಿಯಲ್ಲಿರು ಈ ತರಹದ ಒಂದು ಆಟ ಆಡೋಣವೆಂದುಕೊಂಡವು. ಬೆಳಗಿನ ವ್ಯಾಪಾರಕ್ಕೆಂದು ಸಂತೆಗೆ ಹೋಗುವ ವ್ಯಕ್ತಿಗೆ ಹಾವು ಕಚ್ಚಿತು. ತಿರುಗಿ ನೋಡುವುದರಲ್ಲಿ ಮುಂಗುಸಿ ಇತ್ತು. ಆವಾಗ ಅವನು ಅಂದುಕೊಂಡ ಮುಂಗುಸಿ ಅಲ್ವಾ ಏನು ಆಗುವುದಿಲ್ಲ ಎಂದು ವ್ಯಾಪಾರಕ್ಕೆ ಹೊರಟ ನಂತರ ಕೆಲವೇ ಗಂಟೆಯಲ್ಲಿ ಮತ್ತೊಬ್ಬ ವ್ಯಕ್ತಿ ಸಂತೆಗೆ ಸಾಮಾನು ತರಲು ಹೋಗುತ್ತಿದ್ದ. ಅವನಿಗೆ ಮುಂಗುಸಿ ಕಚ್ಚಿತು ತಿರುಗುವುದರಲ್ಲಿ ಹಾವು ಕಂಡಿತು.



ಭಯದಿಂದಲೇ ಮನೆಗೆ ಓಡಿದ ತಕ್ಷಣವೇ ಕುಸಿದು ಬಿದ್ದ ಕೆಲವೇ ಗಂಟೆಗಳಲ್ಲಿ ಪ್ರಾಣ ಪಕ್ಷಿ ಹಾರಿ ಹೋಯಿತು. ನಂತರ ವ್ಯಾಪಾರ ಮುಗಿಸಿಕೊಂಡು ಸಂಜೆ ಆ ವ್ಯಾಪಾರಿ ಮನೆಗೆ ಬಂದ ದಾರಿಯಲ್ಲಿ ನಡೆದ ಘಟನೆಯ ವಿಚಾರ ಅವನಿಗೂ ತಲುಪಿತು. ಆಗ ಅವನು ನನಗೂ ಬೆಳಗ್ಗೆ ಕಚ್ಚಿತ್ತು. ಆದರೆ ಮುಗಿಸಿ ಎಂದುಕೊಂಡು ಸುಮ್ಮನಿದ್ದೇನೆ ಏನು ಆಗಿಲ್ಲ ಅಂದ ಮನೆಯವರು ತಕ್ಷಣ ಏನೇ ಆಗಲಿ ಡಾಕ್ಟರ್ ಹತ್ತಿರ ತೋರಿಸೋಣ ಬನ್ನಿ ಎಂದು ಕರೆದುಕೊಂಡು ಹೋದರು ನೋಡಿದರೆ ಅವನಿಗೆ ಹಾವು ಕಚ್ಚಿತ್ತು. ಬದುಕಿದ್ದ ಮತ್ತೊಬ್ಬನಿಗೆ ಮುಂಗುಸಿ ಕಚ್ಚಿತ್ತು. ಅವನು ಸತ್ತಿದ್ದ ಹಾಗಾದ್ರೆ ಸತ್ತಿದ್ದು ಯಾವುದರಿಂದ ನೀವೇ ಯೋಚಿಸಿ. ಭಯ ನಮ್ಮನ್ನು ಬೇಗ ಸಾಯಿಸುತ್ತದೆ ಧೈರ್ಯ ನಮ್ಮನ್ನ ಬದುಕಿಸುತ್ತದೆ. ಅದಕ್ಕೆ ನಾವುಗಳು ಧೈರ್ಯವಂತರಾಗಿರಬೇಕು ಹಾಗಾದರೆ ಧೈರ್ಯ ತಂದುಕೊಳ್ಳಲು ಔಷಧಿ ಮಾತ್ರೆಗಳು ಸಿಗುತ್ತವ ಎಂದು ಕೇಳಬೇಡಿ. ಇದಕ್ಕೆಲ್ಲ ಮನಸ್ಸನ್ನು ನಮಗೆ ನಾವೇ ತಯಾರು ಮಾಡಿಕೊಳ್ಳಬೇಕು. ಯೋಗಾಸನ, ಪ್ರಾಣಾಯಾಮ ಧ್ಯಾನ ಸತ್ ಚಿಂತನೆ ಸಜ್ಜನರ ಸಹವಾಸ ಸ್ಫೂರ್ತಿ ತುಂಬುವ ಪುಸ್ತಕಗಳ ಅಧ್ಯಯನ ಹಿರಿಯರ ಸಲಹೆ ಮಾರ್ಗದರ್ಶನ ಇವೆಲ್ಲವುಗಳು ನಮಗೆ ಧೈರ್ಯವನ್ನು ಚೈತನ್ಯವನ್ನು ತಂದುಕೊಡಬಲ್ಲವುಗಳು ಏನಂತೀರಿ.


## ಬಂಧನದಲ್ಲಿ ಮಕ್ಕಳ ಬೆಳವಣಿಗೆ



ಸೌಕರ್ಯಗಳು ಸವಲತ್ತುಗಳು ಹೆಚ್ಚಾದಾಗ ಮನುಷ್ಯನಿಗೆ ಭಯವು ಒಂದು ಕಾಯಿಲೆಯಾಗಿ ರೂಪುಗೊಳ್ಳುತ್ತಿದೆ. ಸಂಸ್ಕೃತದಲ್ಲಿ ಒಂದು ಮಾತಿದೆ ಧೈರ್ಯಂ ಸರ್ವತ್ರ ಸಾಧನಂ. ಅಂದರೆ ಧೈರ್ಯವೇ ಎಲ್ಲಾ ಸಾಧನೆಗಳಿಗೆ ಮೊದಲ ಮೆಟ್ಟಿಲು. ಇವತ್ತಿನ ವ್ಯವಸ್ಥೆ ನೋಡಿದರೆ ಧೈರ್ಯವಂತರಿಗೂ ಒಂದು ಕಡೆ ಭಯವಾಗುತ್ತದೆ ಕಾರಣ ಮಕ್ಕಳನ್ನು ಬೆಳೆಸುತ್ತಿರುವ ರೀತಿ ಅವರಿಗೆ ಪೋಷಕರು ಮಾರ್ಗದರ್ಶನ ಮಾಡುತ್ತಿರುವ ಪದ್ಧತಿ ಎಲ್ಲೋ ಒಂದು ಕಡೆ ಮಕ್ಕಳಲ್ಲಿ ಧೈರ್ಯಗೆಡಿಸುತ್ತಿದೆ. ಅಷ್ಟು ಬಂಧನದ ವಾತಾವರಣದಲ್ಲಿ ಬಳಸುತ್ತಿದ್ದೇವೆ ಇನ್ನೂ ಮಕ್ಕಳಿಗೆ ಸಣ್ಣಪುಟ್ಟ ಕಾಯಿಲೆಗಳು ಬಂತೆಂದರೆ ತಮಗೆ ಬಂದಿದೆಯೇನೋ ಅನ್ನುವ ರೀತಿ ವರ್ತಿಸುವುದನ್ನು ನೋಡಿದರೆ ಮಕ್ಕಳಿಗಿಂತಲೂ ಪೋಷಕರಲ್ಲಿ ಭಯ ಜಾಸ್ತಿ ಇದೆ ಎಂದು ಎದ್ದು ಕಾಣುತ್ತದೆ.

ಇನ್ನು ಪ್ರಜ್ಞಾವಂತ ಜನರಲ್ಲೂ ಸಣ್ಣ ಪುಟ್ಟ ಕಾಯಿಲೆಗಳೇ ಅವರನ್ನು ಭಯಭೀತರನ್ನಾಗಿ ಮಾಡಿದೆ. ಉದಾಹರಣೆಗೆ ಅದೊಂದು ಸಣ್ಣ ರೋಗವಷ್ಟೇ ಸಕ್ಕರೆ ಕಾಯಿಲೆ ಬಂತೆಂದರೆ ಮುಗಿದೇ ಹೋಯಿತು ನಮ್ಮ ಜೀವನ ಎಂಬ ಭಯದಲ್ಲೇ ಎಷ್ಟೋ ಜನ ವಾಕ್ ಮಾಡುವುದು ಯೋಗ ಮಾಡುವುದು ಪ್ರಾಣಾಯಾಮ ಮಾಡುವುದು ಆಹಾರದಲ್ಲಿ ಮಿತಿಯಾಗಿರುವುದು ಅಲ್ಲದೆ ಸಿಹಿಯ ಪದಾರ್ಥವನ್ನೇ ತಿನ್ನಬಾರದೆಂಬ ನಿಯಮ ಹಣ್ಣುಗಳನ್ನುಂತು ತಿನ್ನಲೇಬಾರದು ಎಂಬ ಭ್ರಮಲೋಕದಲ್ಲಿ ಮುಳುಗಿ ಶರೀರಕ್ಕೆ ತಾವೇ ಶಿಕ್ಷೆ ಕೊಟ್ಟುಕೊಳ್ಳುತ್ತಾರೆ. ಇದಕ್ಕೆಲ್ಲ ಕಾರಣ ಭಯ. ಹಾಗಾದರೆ ಏನು ಮಾಡಬೇಕು ಎಂಬ ಮಾತಿಗೆ ಇಷ್ಟೇ ಮೊದಲು ಧೈರ್ಯವಂತರಾಗಬೇಕು ನಂತರವೇ ಈ ಎಲ್ಲಾ ನಿಯಮಗಳನ್ನ ಪಾಲಿಸಬೇಕು.

## ಸಲಗ ದಾಳಿ: ವ್ಯಕ್ತಿ ಪಾರು



ಸಕಲೇಶಪುರ: ಕಾಡಾನೆ ಸಂಚಾರ ಪ್ರದೇಶದಲ್ಲಿ ಜೀಪ್ ರೇಸ್ ನಡೆಸುತ್ತಿದ್ದ ವೇಳೆ ದಿಢೀರ್ ಸ್ಥಳಕ್ಕೆ ಬಂದ ದೈತ್ಯಾಕಾರದ ಸಲಗ ವ್ಯಕ್ತಿಯೊಬ್ಬರನ್ನು ಅಟ್ಟಾಡಿಸಿದೆ.

ಅದೃಷ್ಟವಶಾತ್ ವ್ಯಕ್ತಿ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ತಾಲ್ಲೂಕಿನ ಬೆಳ್ಳೂರು ಗ್ರಾಮದ ಅರಣ್ಯ ಪ್ರದೇಶದಲ್ಲಿ ಭಾನುವಾರ ಘಟನೆ ನಡೆದಿದೆ. ಅರಣ್ಯ ಇಲಾಖೆಯ ಅನುಮತಿ ಪಡೆಯದೆ ಅನಧಿಕೃತವಾಗಿ ರೇಸ್ ನಡೆಸುತ್ತಿದ್ದರು ಎನ್ನಲಾಗಿದೆ. ಹತ್ತಕ್ಕೂ ಹೆಚ್ಚು ಜೀಪ್, ಟೆಂಟ್ ಹಾಕಿ ರೇಸ್ ಆಯೋಜನೆ ಮಾಡಿದ್ದರು. ಜೀಪ್ ರೇಸ್ ಆರಂಭವಾಗುತ್ತಿದ್ದಂತೆಯೇ ಕಾಡಾನೆ ದಿಢೀರನೆ ಹತ್ತಿರ ಬಂದಿದೆ.

ರೇಸ್‌ನಲ್ಲಿ ಭಾಗಿಯಾಗಲು ಕೇರಳದಿಂದ ತಂಡ ಬಂದಿತ್ತು. ವ್ಯಕ್ತಿಯೊಬ್ಬನನ್ನು ಒಂಟಿಸಲಗ ಅಟ್ಟಾಡಿಸಿ ಸೊಂಡಿಲಿನಿಂದ ತಿವಿಯಲು ಯತ್ನಿಸಿತು.

ಜೋರಾಗಿ ಕೂಗಾಡುತ್ತಾ ಕಾಡಾನೆ ಬಳಿಗೆ ಇಬ್ಬರು ಓಡಿದ್ದರಿಂದ ಹಾಗೂ ಜೋರಾಗಿ ಹಾರ್ನ್ ಮಾಡಿದ್ದರಿಂದ ಸ್ಥಳದಿಂದ ಸಲಗ ಕಾಲ್ಕಿತ್ತಿತ್ತು. ಅರಣ್ಯ ಹಾಗೂ ಕಂದಾಯ ಇಲಾಖೆ ವಿರುದ್ಧ ಸ್ಥಳೀಯರು ಆಕ್ರೋಶ ಪಡಿಸಿದ್ದು, ಗಾಯಾಳು ಚಿಕಿತ್ಸೆ ಪಡೆಯುತ್ತಿದ್ದಾರೆ.

## ದಾಖಲೆ ಕಳೆದುಹೋಗಿದೆ

ವರಲಕ್ಷ್ಮಿ ಮೂರ್ತಿ ಕೋಂ. ಮೂರ್ತಿ, ವಯಸ್ಸು ಸುಮಾರು 55 ವರ್ಷ, ಮನೆ ಸಂಖ್ಯೆ 13/1, ಪಾಳ್ಯಂ, ತಳ್ಳಿ ರಸ್ತೆ, ಹೊಸೂರು ತಾಲೂಕು, ಕೃಷ್ಣಗಿರಿ ಜಿಲ್ಲೆ, ತಮಿಳುನಾಡು ರಾಜ್ಯ ಈ ಮೇಲ್ಕಂಡ ವಿಳಾಸದ ನಿವಾಸಿಯಾಗಿರುವ ನಾನು, ಈ ಮೂಲಕ ಪ್ರಮಾಣಪೂರ್ವಕವಾಗಿ ಘೋಷಿಸುತ್ತೇನೆ ಮತ್ತು ಈ ಕೆಳಗಿನಂತೆ ದೃಢೀಕರಿಸುತ್ತೇನೆ:

ನಾನು ಬೆಂಗಳೂರಿನಿಂದ ಸಕಲೇಶಪುರಕ್ಕೆ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಪ್ರಯಾಣಿಸುವಾಗ ನನ್ನ ವ್ಯಾನಿಟಿ ಬ್ಯಾಗ್ ಕಳೆದುಹೋಗಿದೆ. ಅದರಲ್ಲಿ ದಾಖಲೆ ಸಂಖ್ಯೆ 37/2007 ಮತ್ತು ಸರ್ವೆ ಸಂಖ್ಯೆ 565/2 ಒಳಗೊಂಡಿರುವ ಮೂಲ ರಿಜಿಸ್ಟರ್ಡ್ ಸೇಲ್ ಡೀಡ್ ಇತ್ತು. ಮೂಲ ದಾಖಲೆಯು ಕಳೆದುಹೋದ ವ್ಯಾನಿಟಿ ಬ್ಯಾಗ್‌ನಲ್ಲಿದ್ದ ಕಾರಣ, ಒಂದು ವೇಳೆ ಕಳೆದುಹೋದ ದಾಖಲೆಗಳು ಸಿಕ್ಕಿದರೆ, ಅವುಗಳನ್ನು ಯಾವುದೇ ರೀತಿಯಲ್ಲಿ ದುರುಪಯೋಗ ಮಾಡುವುದಿಲ್ಲ ಎಂದು ಭರವಸೆ ನೀಡುತ್ತೇನೆ ಮತ್ತು ಸಂಬಂಧಪಟ್ಟ ಇಲಾಖೆಗೆ ಮರಳಿಸುತ್ತೇನೆ.ಈ ಪ್ರಮಾಣಪತ್ರದಲ್ಲಿ ಒದಗಿಸಿರುವ ಎಲ್ಲಾ ವಿವರಗಳು ಸತ್ಯ ಮತ್ತು ನಿಖರವಾಗಿವೆ ಎಂದು ದೃಢೀಕರಿಸುತ್ತೇನೆ.

ಸಹಿ/
ನೋಟರಿ: ಕಂಬೇಗೌಡ, ಹಾಸನ
ಸ್ಥಳ: ಹಾಸನ
ದಿನಾಂಕ: 27/03/2025
ಸಂಪರ್ಕ: 9944134439

## ಇತಿಹಾಸದಲ್ಲಿ ಈ ದಿನ

### ಏಪ್ರಿಲ್ 15

**1919 ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡ:**

ಅಮೃತಸರದ ಜಲಿಯನ್‌ವಾಲಾ ಬಾಗ್‌ನಲ್ಲಿ ಬ್ರಿಟಿಷ್ ಸೈನ್ಯದ ಜನರಲ್ ಡಯರ್ ಆದೇಶದ ಮೇರೆಗೆ ಶಾಂತಿಯುತವಾಗಿ ಜಮಾಯಿಸಿದ್ದ ಜನಸಮೂಹದ ಮೇಲೆ ಗುಂಡಿನ ದಾಳಿ ನಡೆಯಿತು.

ಹೋರಾಟಗಾರರು ಹತ್ಯೆಗೀಡಾದರು, ಇದು ಭಾರತದ ಸ್ವಾತಂತ್ರ್ಯ ಸಂಗ್ರಾಮದ ದೊಡ್ಡ ದುರಂತ.

**1912 ಟೈಟಾನಿಕ್ ಹಡಗು ಮುಳುಗಡೆ:**

ಐತಿಹಾಸಿಕ ಐಷಾರಾಮಿ ಹಡಗು ಆರ್‌ಎಂಎಸ್ ಟೈಟಾನಿಕ್, ಉತ್ತರ ಅಟ್ಲಾಂಟಿಕ್ ಸಾಗರದಲ್ಲಿ ಹಿಮಗಡ್ಡೆಗೆ ಡಿಕ್ಕಿಯಾಗಿ ಮುಳುಗಿತು. ಸುಮಾರು 1,500 ಜನರು ಸಾವನ್ನಪ್ಪಿದರು. ಇದು ಆ ಕಾಲದ ದೊಡ್ಡ ದುರಂತಗಳಲ್ಲಿ ಒಂದಾಗಿದೆ.

**1945 ಎರಡನೇ ವಿಶ್ವಯುದ್ಧದಲ್ಲಿ ತಿರುವು:**

1945 ಏ. 15ರ ಎರಡನೇ ವಿಶ್ವಯುದ್ಧದ ಕೊನೆಯ ದಿನಗಳಲ್ಲಿ ಮಿತ್ರ ರಾಷ್ಟ್ರಗಳು ಜರ್ಮನಿಯ ಮೇಲೆ ಒತ್ತಡ ಹೇರಿದವು, ಇದು ಯುದ್ಧದ ಅಂತ್ಯಕ್ಕೆ ಕಾರಣವಾಯಿತು.

**2013 ಬಾಸ್ಟನ್ ಮ್ಯಾರಥಾನ್ ಬಾಂಬ್ ದಾಳಿ:**

ಅಮೆರಿಕದ ಬಾಸ್ಟನ್‌ನಲ್ಲಿ ನಡೆದ ಮ್ಯಾರಥಾನ್ ಸಂದರ್ಭದಲ್ಲಿ ಎರಡು ಸ್ಫೋಟಗಳು ಸಂಭವಿಸಿದವು. 3 ಜನರು ಸಾವನ್ನಪ್ಪಿದರು ಮತ್ತು 260ಕ್ಕೂ ಹೆಚ್ಚು ಜನರು ಗಾಯಗೊಂಡರು.

**2019 ನೋಟರ್ ಡೇಮ್ ಕ್ಯಾಥೆಡ್ರಲ್‌ನಲ್ಲಿ ಬೆಂಕಿ:**

ಪ್ಯಾರಿಸ್‌ನ ಐತಿಹಾಸಿಕ ನೋಟರ್ ಡೇಮ್ ಕ್ಯಾಥೆಡ್ರಲ್‌ನಲ್ಲಿ ಬೆಂಕಿಯ ದುರಂತ ಸಂಭವಿಸಿತು, ಇದರಿಂದಾಗಿ ಚರ್ಚಿನ ಗೋಪುರ ಮತ್ತು ಛಾವಣಿಗೆ ಭಾರೀ ಹಾನಿಯಾಯಿತು.

# ಟೈಟಾನಿಕ್ ದುರಂತಕ್ಕೆ 113 ವರ್ಷ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಟೈಟಾನಿಕ್‌ನ್ನು ವೈಟ್ ಸ್ಟಾರ್ ಲೈನ್ ಎಂಬ ಬ್ರಿಟಿಷ್ ಶಿಪ್ಪಿಂಗ್ ಕಂಪನಿಯು ನಿರ್ಮಿಸಿತು. ಇದನ್ನು 1909ರಿಂದ 1912ರ ವರೆಗೆ ಐರ್ಲೆಂಡ್‌ನ ಬೆಲ್‌ಫಾಸ್ಟ್‌ನ ಹಾರ್ಲೆಂಡ್ ಮತ್ತು ವೋಲ್ಫ್ ಶಿಪ್‌ಯಾರ್ಡ್‌ನಲ್ಲಿ ನಿರ್ಮಿಸಲಾಯಿತು. ಈ ಹಡಗನ್ನು ಮುಳುಗದ ಹಡಗು ಎಂದು ಕರೆಯಲಾಗುತ್ತಿತ್ತು. ಏಕೆಂದರೆ ಇದರ ವಿನ್ಯಾಸವು ಆ ಕಾಲದ ಅತ್ಯಾಧುನಿಕ ತಂತ್ರಜ್ಞಾನವನ್ನು ಒಳಗೊಂಡಿತ್ತು.

ಗಾತ್ರ ಮತ್ತು ವೈಶಿಷ್ಟ್ಯಗಳು: ಟೈಟಾನಿಕ್ 882 ಅಡಿ ಉದ್ದ, 92 ಅಡಿ ಅಗಲವಾಗಿದ್ದು, ಸುಮಾರು 46,328 ಟನ್ ತೂಕವಿತ್ತು. ಇದರಲ್ಲಿ 16 ಜಲನಿರೋಧಕ ಕೋಣೆಗಳು, ಡಬಲ್ ಬಾಟಮ್ ಮತ್ತು ಅತ್ಯಾಧುನಿಕ ಎಂಜಿನ್‌ಗಳಿದ್ದವು.

ವರ್ಗ ವಿಭಾಗ: ಟೈಟಾನಿಕ್ ಮೂರು ವರ್ಗದ ಪ್ರಯಾಣಿಕರಿಗೆ ಸೌಕರ್ಯವನ್ನು ಒದಗಿಸಿತು.

ಪ್ರಥಮ ದರ್ಜೆ: ಶ್ರೀಮಂತ ಮತ್ತು ಪ್ರತಿಷ್ಠಿತ ವ್ಯಕ್ತಿಗಳಿಗಾಗಿ ಐಷಾರಾಮಿ ಸೌಲಭ್ಯಗಳಾದ ಈಜುಕೊಳ, ಜಿಮ್, ಟರ್ಕಿಶ್ ಬಾತ್ ಮತ್ತು ಭವ್ಯವಾದ ಊಟದ ಕೊಠಡಿಗಳು.

ದ್ವಿತೀಯ ದರ್ಜೆ: ಮಧ್ಯಮ ವರ್ಗದವರಿಗಾಗಿ ಆರಾಮದಾಯಕ ಕೊಠಡಿಗಳು.

ತೃತೀಯ ದರ್ಜೆ: ವಲಸಿಗರಿಗೆ ಮತ್ತು ಕಡಿಮೆ ಆದಾಯದವರಿಗೆ ಸರಳವಾದ ಸೌಲಭ್ಯಗಳು.

ಪ್ರಯಾಣಿಕರ ಸಂಖ್ಯೆ: ಟೈಟಾನಿಕ್ ತನ್ನ ಮೊದಲ ಪ್ರಯಾಣದಲ್ಲಿ ಸುಮಾರು 2,224 ಜನರನ್ನು (ಪ್ರಯಾಣಿಕರು ಮತ್ತು ಸಿಬ್ಬಂದಿ) ಹೊತ್ತೊಯ್ಯಿತು. ಟೈಟಾನಿಕ್‌ನ ಮೊದಲ ಪ್ರಯಾಣ 1912ರ ಏಪ್ರಿಲ್ 10ರಂದು ಟೈಟಾನಿಕ್ ಇಂಗ್ಲೆಂಡ್‌ನ ಸೌತಾಂಪ್ಟನ್‌ನಿಂದ ನ್ಯೂಯಾರ್ಕ್‌ಗೆ ತನ್ನ ಮೊದಲ ಪ್ರಯಾಣವನ್ನು ಆರಂಭಿಸಿತು.

ಕ್ಯಾಪ್ಟನ್ ಎಡ್ವರ್ಡ್ ಸ್ಮಿತ್ ಈ ಹಡಗಿನ ನಾಯಕರಾಗಿದ್ದರು, ಅವರು ವೈಟ್ ಸ್ಟಾರ್ ಲೈನ್‌ನ ಅತ್ಯಂತ ಅನುಭವಿ ಕ್ಯಾಪ್ಟನ್‌ಗಳಲ್ಲಿ ಒಬ್ಬರಾಗಿದ್ದರು. ಪ್ರಯಾಣದ ಮೊದಲ ದಿನಗಳು ಸುಗಮವಾಗಿದ್ದವು. ಪ್ರಯಾಣಿಕರು ಹಡಗಿನ ಐಷಾರಾಮಿ ಸೌಕರ್ಯಗಳನ್ನು ಆನಂದಿಸಿದರು. ಆದರೆ ಏಪ್ರಿಲ್ 14, 1912ರಂದು ಹಡಗು ಉತ್ತರ ಅಟ್ಲಾಂಟಿಕ್‌ನ ಶೀತಲ ಜಲಪ್ರದೇಶಕ್ಕೆ ಪ್ರವೇಶಿಸಿತು, ಅಲ್ಲಿ ಹಿಮಗಡ್ಡೆಗಳ ಬಗ್ಗೆ ಎಚ್ಚರಿಕೆ ಸಂದೇಶಗಳು ಬಂದಿದ್ದವು.

ದುರಂತದ ಕಾರಣಗಳು: ಹಿಮಗಡ್ಡೆ ಎಚ್ಚರಿಕೆ ಇದ್ದರೂ, ಟೈಟಾನಿಕ್ ಗರಿಷ್ಠ ವೇಗದಲ್ಲಿ ಸಂಚರಿಸುತ್ತಿತ್ತು. ಏಕೆಂದರೆ ಆ ಕಾಲದಲ್ಲಿ ವೇಗವು ಒಂದು ಪ್ರತಿಷ್ಠಿತ ಸಂಗತಿಯಾಗಿತ್ತು. ಡಿಕ್ಕಿಯಾದ ಹಿಮಗಡ್ಡೆಯು ನೀರಿನ ಮೇಲ್ಭಾಗದಲ್ಲಿ ಸಣ್ಣದಾಗಿ ಕಾಣಿಸಿದರೂ ಅದರ ಜಲಾಂತರ್ಗಾಮಿ ಭಾಗವು ದೊಡ್ಡದಾಗಿತ್ತು. ರೇಡಿಯೋ ಆಪರೇಟರ್‌ಗಳು ಹಿಮಗಡ್ಡೆ ಎಚ್ಚರಿಕೆಗಳನ್ನು ಕಡೆಗಣಿಸಿದರು ಮತ್ತು ಇತರ ಹಡಗುಗಳಿಗೆ ಸರಿಯಾದ ಎಸ್‌ಒಎಸ್ ಸಂದೇಶವನ್ನು ರವಾನಿಸಲಿಲ್ಲ.

ವಿನ್ಯಾಸದ ದೋಷ: ಜಲನಿರೋಧಕ ಕೋಣೆಗಳ ಗೋಡೆಗಳು ಹಡಗಿನ ಮೇಲ್ಭಾಗದವರೆಗೆ ಇರಲಿಲ್ಲ, ಅದರಿಂದ ಒಂದು ಕೋಣೆಕೆ ತುಂಬಿದಾಗ ನೀರು ಇತರ ಕೋಣೆಗಳಿಗೆ ಹರಿಯಿತು.

ದುರಂತದ ಪರಿಣಾಮಗಳು: ಟೈಟಾನಿಕ್ ದುರಂತವು ಸಮುದ್ರ ಸಂಚಾರದಲ್ಲಿ ದೂರಗಾಮಿ ಬದಲಾವಣೆಗಳಿಗೆ ಕಾರಣವಾಯಿತು. 1914ರಲ್ಲಿ ಇಂಟರ್‌ನ್ಯಾಷನಲ್ ಕನ್ವೆನ್ಷನ್ ಫಾರ್ ದಿ ಸೇಫ್ಟಿ ಆಫ್ ಲೈಫ್ ಎಟ್ ಸೀ ಸ್ಥಾಪನೆಯಾಯಿತು.




ಸಾಮಾಜಿಕ ಪರಿಣಾಮ: ಈ ದುರಂತವು ವರ್ಗ ಶ್ರೇಣೀಕರಣದ ಮೇಲೆ ಚರ್ಚೆಗೆ ಕಾರಣವಾಯಿತು, ಏಕೆಂದರೆ ತೃತೀಯ ದರ್ಜೆಯ ಪ್ರಯಾಣಿಕರ ಸಾವಿನ ಪ್ರಮಾಣವು ಅತಿ ಹೆಚ್ಚಿತ್ತು. ಟೈಟಾನಿಕ್ ದುರಂತವು ಸಾಹಿತ್ಯ, ಚಲನಚಿತ್ರಗಳು (ಉದಾ. 1997ರ ಟೈಟಾನಿಕ್ ಚಿತ್ರ) ಮತ್ತು ಸಂಗೀತದಲ್ಲಿ ಶಾಶ್ವತವಾದ ಛಾಪು ಮೂಡಿಸಿದೆ.

ಟೈಟಾನಿಕ್‌ನ ಅವಶೇಷಗಳು: 1985ರಲ್ಲಿ ರಾಬರ್ಟ್ ಬಲಾರ್ಡ್ ನೇತೃತ್ವದ ತಂಡವು ಉತ್ತರ ಅಟ್ಲಾಂಟಿಕ್ ಸಾಗರದ ತಳದಲ್ಲಿ 12,500 ಅಡಿ ಆಳದಲ್ಲಿ ಟೈಟಾನಿಕ್‌ನ ಅವಶೇಷಗಳನ್ನು ಕಂಡುಹಿಡಿಯಿತು. ಹಡಗು ಎರಡು ಭಾಗಗಳಾಗಿ ಒಡೆದಿತ್ತು. ಅನೇಕ ವಸ್ತುಗಳು (ಕುರ್ಚಿಗಳು, ತಟ್ಟೆಗಳು, ಆಭರಣಗಳು) ಸಂರಕ್ಷಿತವಾಗಿದ್ದವು. ಈ ಆವಿಷ್ಕಾರವು ಟೈಟಾನಿಕ್‌ನ ಕಥೆಯನ್ನು ಮತ್ತೆ ಜನಪ್ರಿಯಗೊಳಿಸಿತು.

ಒಂದು ದಾರುಣ ಘಟನೆ: 2023ರ ಜೂನ್‌ನಲ್ಲಿ ಉತ್ತರ ಅಟ್ಲಾಂಟಿಕ್ ಸಾಗರದ ಆಳದಲ್ಲಿ ಸಂಭವಿಸಿದ ಟೈಟಾನ್ ಸಬ್‌ಮರಿನ್ ದುರಂತವು ವಿಶ್ವದ ಗಮನವನ್ನು ಸೆಳೆದ ಒಂದು ದುಃಖಕರ ಘಟನೆಯಾಗಿದೆ.

ಟೈಟಾನಿಕ್ ಹಡಗಿನ ಅವಶೇಷಗಳನ್ನು ವೀಕ್ಷಿಸಲು ತೆರಳಿದ್ದ ಐವರು ಪ್ರವಾಸಿಗರನ್ನು ಒಳಗೊಂಡ ಈ ಸಬ್‌ಮರಿನ್ ಕ್ಯಾಟಾಸ್ಟ್ರಾಫಿಕ್ ಇಂಪ್ಲೋಷನ್ (ವಿನಾಶಕಾರಿ ಸ್ಫೋಟ)ಕ್ಕೆ ಒಳಗಾಗಿ ಮುಳುಗಡೆಯಾಯಿತು. ಈ ಘಟನೆಯು ಆಳ ಸಮುದ್ರ ಪರಿಶೋಧನೆಯ ಸುರಕ್ಷತೆಯ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎತ್ತಿದೆ.

ಘಟನೆಯ ಹಿನ್ನೆಲೆ: ಟೈಟಾನ್ ಸಬ್‌ಮರಿನ್ ಓಸಿಯನ್‌ಗೇಟ್ ಎಕ್ಸ್‌ಪೆಡಿಷನ್ಸ್ ಎಂಬ ಕಂಪನಿಯಿಂದ ನಿರ್ವಹಿಸಲ್ಪಡುತ್ತಿತ್ತು.

ಈ ಕಂಪನಿಯು ಶ್ರೀಮಂತ ಪ್ರವಾಸಿಗರಿಗೆ ಟೈಟಾನಿಕ್‌ನ ಅವಶೇಷಗಳನ್ನು ಆಳ ಸಮುದ್ರದಲ್ಲಿ (ಸುಮಾರು 13,000 ಅಡಿ ಆಳದಲ್ಲಿ) ವೀಕ್ಷಿಸುವ ವಿಶೇಷ ಅವಕಾಶವನ್ನು ಒದಗಿಸುತ್ತಿತ್ತು.



> ಟೈಟಾನಿಕ್ ಹಡಗಿನ ದುರಂತವು ಇತಿಹಾಸದಲ್ಲಿ ಅತ್ಯಂತ ಚರ್ಚಿತ ಮತ್ತು ದುಃಖಕರ ಘಟನೆಯಾಗಿದೆ. 20ನೇ ಶತಮಾನದ ಆರಂಭದಲ್ಲಿ ಟೈಟಾನಿಕ್ ಎಂಬ ಐಷಾರಾಮಿ ಹಡಗು ತನ್ನ ಮೊದಲ ಪ್ರಯಾಣದಲ್ಲಿ ಉತ್ತರ ಅಟ್ಲಾಂಟಿಕ್ ಸಾಗರದಲ್ಲಿ ಒಂದು ಹಿಮಗಡ್ಡೆಗೆ ಡಿಕ್ಕಿ ಹೊಡೆದು, ಸುಮಾರು 1,500ಕ್ಕೂ ಹೆಚ್ಚು ಜನರ ಸಾವಿಗೆ ಕಾರಣವಾಯಿತು. ಈ ದುರಂತವು ಸಮುದ್ರ ಸುರಕ್ಷತೆ, ಹಡಗು ನಿರ್ಮಾಣ ಮತ್ತು ತುರ್ತು ನಿರ್ವಹಣೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳಿಗೆ ದಾರಿಮಾಡಿತು. ಟೈಟಾನಿಕ್ ಹಡಗಿನ ಇತಿಹಾಸ, ದುರಂತದ ಕಾರಣಗಳು ಮತ್ತು ಅದರ ದೀರ್ಘಕಾಲೀನ ಪರಿಣಾಮಗಳನ್ನು ಇಲ್ಲಿ ವಿವರಿಸಲಾಗಿದೆ.

## ದುರಂತದ ಕ್ಷಣಗಳು



ಯಾತ್ರೆ ಆರಂಭವಾದ ಕೆಲವೇ ಗಂಟೆಗಳಲ್ಲಿ, ಸಬ್‌ಮರಿನ್‌ನೊಂದಿಗೆ ಸಂಪರ್ಕ ಕಡಿತಗೊಂಡಿತು. ಸಾಮಾನ್ಯವಾಗಿ ಎಂಟು ಗಂಟೆಗಳ ಈ ಯಾತ್ರೆಯಲ್ಲಿ, ಒಂದೂವರೆ ಗಂಟೆಯೊಳಗೆ ಸಂಪರ್ಕ ಕಳೆದುಕೊಂಡಿತು. ಇದು ಓಸಿಯನ್ ಗೇಟ್‌ಗೆ ಆತಂಕಕಾರಿಯಾಯಿತು, ಮತ್ತು ತಕ್ಷಣವೇ ರಕ್ಷಣಾ ಕಾರ್ಯಾಚರಣೆ ಆರಂಭವಾಯಿತು. ಅಮೆರಿಕದ ಕರಾವಳಿ ರಕ್ಷಣಾ ದಳ, ಕೆನಡಾದ ನೌಕಾಪಡೆ ಮತ್ತು ಇತರ ಅಂತಾರಾಷ್ಟ್ರೀಯ ತಂಡಗಳು ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿದವು. ರಕ್ಷಣಾ ತಂಡಗಳು ಸಮುದ್ರದ ಆಳದಲ್ಲಿ ಶಬ್ದಗಳನ್ನು ಕೇಳಿದವು. ಇದು ಸಬ್‌ಮರಿನ್‌ನಿಂದ ಬಂದಿರಬಹುದು ಎಂಬ ಆಶಾಭಾವವನ್ನು ಹುಟ್ಟುಹಾಕಿತು.


ಆದರೆ, ಜೂನ್ 22ರಂದು, ರಕ್ಷಣಾ ತಂಡಗಳು ಸಬ್‌ಮರಿನ್‌ನ ಅವಶೇಷಗಳನ್ನು ಟೈಟಾನಿಕ್‌ನಿಂದ ಕೆಲವೇ ನೂರು ಮೀಟರ್ ದೂರದಲ್ಲಿ ಕಂಡುಕೊಂಡವು. ತನಿಖೆಯಿಂದ ಗೊತ್ತಾದಂತೆ, ಸಬ್‌ಮರಿನ್ ಆಳ ಸಮುದ್ರದ ಒತ್ತಡವನ್ನು ತಡೆಯಲಾಗದೆ ಸ್ಫೋಟಗೊಂಡಿತ್ತು, ಇದರಿಂದ ಒಳಗಿದ್ದ ಎಲ್ಲರೂ ತಕ್ಷಣವೇ ಮೃತಪಟ್ಟಿದ್ದರು.

## ದುರಂತದ ಕ್ಷಣ-ಮುಳುಗುವಿಕೆ

ಏಪ್ರಿಲ್ 14, 1912 ರಾತ್ರಿ 11:40ಕ್ಕೆ ಟೈಟಾನಿಕ್ ಒಂದು ದೊಡ್ಡ ಹಿಮಗಡ್ಡೆಗೆ ಡಿಕ್ಕಿ ಹೊಡಿಯಿತು. ಈ ಡಿಕ್ಕಿಯಿಂದ ಹಡಗಿನ ಬಲಭಾಗದಲ್ಲಿ ದೊಡ್ಡ ರಂಧ್ರವಾಯಿತು, ಇದರಿಂದ ಐದು ಜಲನಿರೋಧಕ ಕೋಣೆಗಳಿಗೆ ನೀರು ತುಂಬಿಕೊಂಡಿತು.

ಪರಿಣಾಮ: ಹಡಗಿನ ವಿನ್ಯಾಸವು ಗರಿಷ್ಠ ನಾಲ್ಕು ಕೋಣೆಗಳಿಗೆ ನೀರು ತುಂಬಿದರೂ ಸುರಕ್ಷಿತವಾಗಿರುವಂತೆ ಇತ್ತು. ಆದರೆ ಐದು ಕೋಣೆಕೆಗಳು ತುಂಬಿದ್ದರಿಂದ ಹಡಗು ಮುಳುಗುವುದು ಅನಿವಾರ್ಯವಾಯಿತು.

ಮುಳುಗುವಿಕೆ: ಏಪ್ರಿಲ್ 15, 1912ರ ಬೆಳಿಗ್ಗೆ 2:20ಕ್ಕೆ ಡಿಕ್ಕಿಯಾದ ಸುಮಾರು ಎರಡೂವರೆ ಗಂಟೆಗಳ ನಂತರ, ಟೈಟಾನಿಕ್ ಸಂಪೂರ್ಣವಾಗಿ ಸಮುದ್ರದಲ್ಲಿ ಮುಳುಗಿತು.



## ಸಬ್‌ಮರಿನ್‌ನ ವಿನ್ಯಾಸದ ದೋಷ

ಟೈಟಾನ್ ಸಬ್‌ಮರಿನ್ ಕಾರ್ಬನ್ ಫೈಬರ್ ಮತ್ತು ಟೈಟಾನಿಯಂನಿಂದ ನಿರ್ಮಿತವಾಗಿತ್ತು. ಆದರೆ, ತಜ್ಞರು ಈ ವಿನ್ಯಾಸವು ಆಳ ಸಮುದ್ರದ ವಿಪರೀತ ಒತ್ತಡವನ್ನು (ಸುಮಾರು 400 ವಾತಾವರಣದ ಒತ್ತಡ) ತಡೆಯಲು ಸಾಕಷ್ಟು ಬಲಿಷ್ಠವಾಗಿರಲಿಲ್ಲ ಎಂದು ಶಂಕಿಸಿದ್ದಾರೆ.

## ಲೈಫ್ ಬೋಟ್‌ಗಳ ಕೊರತೆ

ಟೈಟಾನಿಕ್‌ನಲ್ಲಿ ಕೇವಲ 20 ಲೈಫ್‌ಬೋಟ್‌ಗಳಿದ್ದವು, ಇವು ಕೇವಲ 1,178 ಜನರಿಗೆ ಸಾಕಾಗುವಂತಿತ್ತು. ಆದರೆ ಹಡಗಿನಲ್ಲಿ 2,224 ಜನರಿದ್ದರು. ಮಹಿಳೆಯರು ಮತ್ತು ಮಕ್ಕಳನ್ನು ಮೊದಲು ರಕ್ಷಿಸಬೇಕೆಂಬ ಆದೇಶವಿದ್ದರೂ ಕೆಲವು ಲೈಫ್‌ಬೋಟ್‌ಗಳು ಅರ್ಧ ತುಂಬಿಯೇ ಇಳಿಸಲ್ಪಟ್ಟವು. ಪ್ರಥಮ ದರ್ಜೆಯ ಪ್ರಯಾಣಿಕರಿಗೆ ಹೆಚ್ಚಿನ ಆದ್ಯತೆ ನೀಡಲಾಯಿತು, ಇದರಿಂದ ತೃತೀಯ ದರ್ಜೆಯ ಅನೇಕ ಪ್ರಯಾಣಿಕರು ಹಿಂದೆ ಉಳಿದರು.

ರಕ್ಷಣೆ: ಕಾರ್ಪಾತಿಯಾ ಎಂಬ ಹಡಗು ಸುಮಾರು 700 ಜನರನ್ನು ರಕ್ಷಿಸಿತು. ಆದರೆ ಉಳಿದವರಲ್ಲಿ ಹೆಚ್ಚಿನವರು ಶೀತಲ ಸಮುದ್ರದಲ್ಲಿ ಚಳಿಯಿಂದ ಸಾವನ್ನಪ್ಪಿದರು.



ಒಂದು ಟಿಕೆಟ್‌ಗೆ ಸುಮಾರು 250,000 ಡಾಲರ್‌ಗಳಷ್ಟು ವೆಚ್ಚವಾಗುತ್ತಿದ್ದ ಈ ಸಾಹಸಯಾತ್ರೆಯು ಐಷಾರಾಮಿ ಮತ್ತು ರೋಮಾಂಚಕ ಅನುಭವವನ್ನು ನೀಡುವ ಭರವಸೆಯನ್ನು ಹೊಂದಿತ್ತು.

2023ರ ಜೂನ್ 18ರಂದು, ಟೈಟಾನ್ ಸಬ್‌ಮರಿನ್ ಐವರು ವ್ಯಕ್ತಿಗಳೊಂದಿಗೆ ತನ್ನ ಯಾತ್ರೆಯನ್ನು ಆರಂಭಿಸಿತು.

ಈ ಐವರಲ್ಲಿ ಓಸಿಯನ್‌ಗೇಟ್‌ನ ಸಿಇಓ ಸ್ಟಾಕ್‌ಟನ್ ರಶ್, ಬ್ರಿಟಿಷ್ ಶತಕೋಟ್ಯಾಧಿಪತಿ ಹಮೀಶ್ ಹಾರ್ಡಿಂಗ್, ಫ್ರೆಂಚ್ ಡೈವರ್ ಪಾಲ್-ಹೆನ್ರಿ ನಾರ್ಜಿಯೊಲೆಟ್, ಮತ್ತು ಪಾಕಿಸ್ತಾನಿ ಮೂಲದ ಉದ್ಯಮಿ ಶಹಜಾದ ದಾವೂದ್ ಮತ್ತು ಅವರ ಮಗ ಸುಲೈಮಾನ್ ದಾವೂದ್ ಸೇರಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248